**SC No. 110/2017**
**PW-39**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 110/2017

| | | |
|---|---|---|
| ಸಾಕ್ಷಿದಾರರ ಹೆಸರು | ಎಂ. ರಾಮಕೃಷ್ಣ | ಪ್ರಮಾಣ ವಚನ ಮಾಡಿದ ದಿನಾಂಕ: 08.12.2025 |
| ತಂದೆಯ/ಗಂಡನ ಹೆಸರು | ಮರಿನಾಯ್ಕ ಕೆ.ಜೆ. | |
| ವಯಸ್ಸು | 48 ವರ್ಷ | |
| ವೃತ್ತಿ | ವಕೀಲರು | ಪ್ರಾ.ಸಾಃ 39 |
| ವಾಸ ಸ್ಥಳ | ಪಡುವಾರಹಳ್ಳಿ ಮೈಸೂರು | ಚಾ.ಸಾಃ 60 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು 2006 ರಿಂದ ವಕೀಲವೃತ್ತಿಯನ್ನು ಮೈಸೂರಿನಲ್ಲಿ ಮಾಡುತ್ತಿದ್ದೇನೆ. ನನ್ನ ಮೊಬೈಲ್ ನಂಬರ್ 99026452207 ಇರುತ್ತದೆ. ನಾನು ಸದರಿ ಮೊಬೈಲ್ ನಂಬರ್ ಅನ್ನು ಕಳೆದ 20 ವರ್ಷಗಳಿಂದ ಬಳಸುತ್ತಿದ್ದೇನೆ. ಸದರಿ ಸಿಮ್ ನನ್ನ ಹೆಸರಿನಲ್ಲಿ ಇರುತ್ತದೆ. 10 ನೇ ಆರೋಪಿ ಮಂಜೇಶ್ ನನ್ನ ಮನೆಯ ಪಕ್ಕದ ವಾಸಿ ಇರುತ್ತಾರೆ. ನಾನು ವಾಸ ಮಾಡುತ್ತಿರುವ ಮನೆ ನನ್ನ ಸ್ವಂತ ಮನೆ ಇರುತ್ತದೆ. ನನಗೆ 10 ನೇ ಆರೋಪಿ ಮಂಜೇಶ್ ಚಿಕ್ಕವನು ಇದ್ದಾಗಿನಿಂದ ಪರಿಚಯ ಇರುತ್ತಾರೆ. ಆತನ ವಿರುದ್ಧ ಮೊದಲನೇ ಕೇಸು ಯಾವ ವರ್ಷದಲ್ಲಿ ದಾಖಲಾಗಿತ್ತು ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಮತ್ತು ಆ ಪ್ರಕರಣದಲ್ಲಿ 10 ನೇ ಆರೋಪಿ ಯಾವ ವಕೀಲರನ್ನು ನೇಮಕ ಮಾಡಿಕೊಂಡಿದ್ದರು

ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಕ್ರಿಮಿನಲ್ ಪ್ರಕರಣದಲ್ಲಿ 10 ನೇ ಆರೋಪಿ ಪರವಾಗಿ ಹಾಜರಾಗಿದ್ದೆ ಆದರೆ ಎಷ್ಟು ಪ್ರಕರಣಗಳಲ್ಲಿ ಹಾಜರಾಗಿದ್ದೆ ಎಂದು ನನಗೆ ಈಗ ನನಗ ನೆನಪಲ್ಲಿ ಇರುವುದಿಲ್ಲ. 10 ನೇ ಆರೋಪಿ ಮಂಜೇಶ್ ಸುಮಾರು ಎಷ್ಟು ವರ್ಷಗಳಿಂದ ಜೈಲಿನಲ್ಲಿ ಇರುತ್ತಾನೆ ಎನ್ನುವ ಬಗ್ಗೆ ನನಗೆ ನೆನಪಲ್ಲಿ ಇರುವುದಿಲ್ಲ. ಈಗ 10 ನೇ ಆರೋಪಿ ಮಂಜೇಶ್ ಜೈಲಿನಲ್ಲಿ ಇರುತ್ತಾನೆ. ಆತನು ಒಂದು ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿ ಇರುತ್ತಾನೆ. ಆತನ ಫೋನ್ ನಂಬರ್ ನನಗೆ ಗೊತ್ತಿರುವುದಿಲ್ಲ. 8123907706 ನಂಬರ್ ಗೊತ್ತಿರುವುದಿಲ್ಲ. 10 ನೇ ಆರೋಪಿ ಮಂಜೇಶ್ ಜೈಲಿಗೆ ಹೋದ ಮೇಲೆ ನನಗೆ ಫೋನ್ ಮಾಡಿದ್ದನೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ನೆನಪಲ್ಲಿ ಇರುವುದಿಲ್ಲ. ನಾನು ವಿವಿ ಪುರಂ ಪೊಲೀಸ್ ಠಾಣೆಗೆ ಹೋಗಿದ್ದರ ಬಗ್ಗೆ ನೆನಪಲ್ಲಿ ಇರುವುದಿಲ್ಲ ಆದರೆ ವಿವಿ ಪುರಂ ಪೊಲೀಸರು 10 ನೇ ಆರೋಪಿ ನನಗೆ ಚಿಕ್ಕಂದಿನಿಂದ ಗೊತ್ತಿದ್ದರಿಂದ ಮತ್ತು ನನ್ನ ಕಕ್ಷಿದಾರರು ಇದುದರಿಂದ ನನಗೆ ಆಗಾಗ್ಗೆ ಫೋನ್ ಮಾಡುತ್ತಿದ್ದ ಈ ವಿಷಯವಾಗಿ ನಾನು ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರಲ್ಲಿ ಹೇಳಿರುತ್ತೇನೆ. ಸಾಕ್ಷಿದಾರರಿಗೆ ಹೇಳಿಕೆಯನ್ನು ತೋರಿಸಲಾಯಿತು. ಸಾಕ್ಷಿದಾರರು ಹೇಳಿಕೆಯನ್ನು ನೋಡಿ ಗುರುತಿಸಿದ್ದು ಹೇಳಿಕೆಯನ್ನು ನಿಪಿ–129 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ–129(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು 10 ನೇ ಆರೋಪಿ ಮಂಜೇಶ್ ನನ್ನು ನೋಡಿದರೆ

ಗುರುತಿಸುತ್ತೇನೆ. ನಾನು ಈಗ ನೋಡುತ್ತಿರುವ ವಿಸಿ ಮೂಲಕ ಹಾಜರುಪಡಿಸಿರುವ ಆರೋಪಿತರೇ ಈ ಪ್ರಕರಣದ 10 ನೇ ಆರೋಪಿ ಮಂಜೇಶ್ ಇರುತ್ತಾರೆ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

10 ನೇ ಆರೋಪಿ ಮಂಜೇಶ್ 2015 ನೇ ಇಸವಿಯಲ್ಲಿ ರಾಘವೇಂದ್ರ @ ಲಲ್ಲು ಕೊಲೆ ಪ್ರಕರಣದಲ್ಲಿ ಆರೋಪಿ ಯಾಗಿದ್ದು ಆತನು ಸದರಿ ಪ್ರಕರಣದಲ್ಲಿ ನನ್ನ ಕಕ್ಷಿದಾರ ಇದ್ದ ಎಂದರೆ ನೆನಪಲ್ಲಿ ಇರುವುದಿಲ್ಲ. 2017 ಜನವರಿಗಿಂತ ಸುಮಾರು 10 ತಿಂಗಳಿಂದ ಈಚೆಗೆ 10 ನೇ ಆರೋಪಿ ಮಂಜೇಶ್ ಮೈಸೂರು ಜೈಲಿನಲ್ಲಿ ಇದ್ದು 8123907706 ನಂಬರ್ ನಿಂದ ಮತ್ತು ಇತರೆ ಸಿಮ್ ನಂಬರ್ ಗಳಿಂದ ನನ್ನ ಮೊಬೈಲ್ ನಂಬರ್ 9902645207 ಗೆ ಸುಮಾರು 25-30 ಬಾರಿ ನನಗೆ ಕರೆ ಮಾಡಿದ್ದ ಎಂದರೆ, ಕರೆ ಮಾಡಿದ್ದ ಆದರೆ ಕರೆಗಳು ಬಂದಂತಹ ನಂಬರ್ ಗಳು ಜ್ಞಾಪಕದಲ್ಲಿ ಇರುವುದಿಲ್ಲ. ದಿನಾಂಕ 12.01.2017 ರಂದು ವಿವಿಪುರಂ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಆ ಠಾಣೆಯಲ್ಲಿ ನಾನು ಮಂಜೇಶ್ ನನ್ನು ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ಆ ದಿನ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದ ನಿಪಿ-130

ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. 10 ನೇ ಆರೋಪಿ ನನಗೆ ಯಾವ ನಂಬರ್ ಗಳಿಂದ ಕರೆ ಮಾಡುತ್ತಿದ್ದ ಮತ್ತು ಯಾವ ಪ್ರಕರಣದಲ್ಲಿ ಜೈಲಿನಲ್ಲಿ ಇದ್ದ ಎನ್ನುವ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆತನು ನನ್ನ ಕಕ್ಷಿದಾರನು ಇರುವುದರಿಂದ ಜ್ಞಾಪಕದಲ್ಲಿ ಇರುವುದಿಲ್ಲ ಎಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರ ಶ್ರೀ ಎಂ.ಎಸ್.ಸಿ. ವಕೀಲರಿಂದ :**

ನಾನು ಮೈಸೂರಿನ ಪಡುವಾರಹಳ್ಳಿಯಲ್ಲಿ ವಕೀಲ ವೃತ್ತಿ ಮಾಡುತ್ತಿರುವುದರಿಂದ ನನಗೆ ಪಡುವಾರಹಳ್ಳಿಯಲ್ಲಿ ಸುಮಾರು ಜನ ಕಕ್ಷಿದಾರರು ಇರುತ್ತಾರೆ ಎಂದರೆ ಸರಿ. ಪಡುವಾರಹಳ್ಳಿಯಲ್ಲಿ ಇರುವ ಅನೇಕ ನಾಯಕರು ನನಗೆ ಗೊತ್ತಿರುತ್ತಾರೆ ಎಂದರೆ ಸರಿ. 10 ನೇ ಆರೋಪಿ ನನಗೆ ಯಾವತ್ತೂ ಕಕ್ಷಿದಾರನಾಗಿ ಇರಲಿಲ್ಲ ಅದೇ ಕಾರಣಕ್ಕಾಗಿ ನಾನು ನೆನಪಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಪೊಲೀಸರು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವ ಬಗ್ಗೆ ಬರುವಂತೆ ಸಮನ್ಸ್ ನೀಡಿದಾಗ ನನಗೆ 10 ನೇ ಆರೋಪಿ ಮಂಜೇಶ ಯಾವ ಪ್ರಕರಣದಲ್ಲಿ ನನಗೆ ಕಕ್ಷಿದಾರ ಇದ್ದ ಎನ್ನುವ ಬಗ್ಗೆ ನೆನಪಿರುವುದಿಲ್ಲ. ಪೊಲೀಸರು ನನಗೆ 10 ನೇ ಆರೋಪಿ ಯಾವ ಪ್ರಕರಣದಲ್ಲಿ ನನಗೆ ಕಕ್ಷಿದಾರನಾಗಿದ್ದ ಎನ್ನುವ ಬಗ್ಗೆ ದಾಖಲೆಗಳನ್ನು ಕೊಡಿ ಅಂತ ಕೇಳಿರಲಿಲ್ಲ. ಕೊಲೆ ಆಗಿರುವ ಬೆಣ್ಣೆ ಕೃಷ್ಣ ರವರ ಪರಿಚಯ ನನಗೆ ಇತ್ತು ಎಂದರೆ ಸರಿ. ನನಗೆ ಪಡುವಾರಳ್ಳಿ ವಾಸಿ ಅವ್ವ ಮಾದೇಶ ಗೊತ್ತಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮಂಜೇಶ, ಮೃತ ಕೃಷ್ಣ ಹಾಗೂ

ಪಡುವಾರಳ್ಳಿಯಲ್ಲಿ ಇರುವಂತಹ ಸುಮಾರು ಜನರ ಪರಿಚಯ ನನಗೆ ಇರುತ್ತದೆ ಎಂದರೆ ಸರಿ. ಆರೋಪಿ ಮಂಜೇಶ ನನ್ನ ಪಕ್ಕದ ಮನೆ ವಾಸಿ ಇರುವುದಿಲ್ಲ ನಮ್ಮ ಬೀದಿಯಲ್ಲಿ ವಾಸ ಮಾಡುವ ನಿವಾಸಿ ಎಂದರೆ ಸರಿ. ಆರೋಪಿ ಮಂಜೇಶ ನನ್ನ ಕಕ್ಷಿದಾರ ಇರಲಿಲ್ಲ ಯಾವತ್ತೂ ನನ್ನೊಂದಿಗೆ ಒಡನಾಟ ಇರಲಿಲ್ಲ ಎಂದರೆ ಸರಿಯಲ್ಲ. ಮೃತ ಬೆಣ್ಣೆ ಕೃಷ್ಣ ಅವರ ಕುಟುಂಬದವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿ 10 ಮಂಜೇಶ ನನಗೆ ಆಗಾಗ್ಗೆ ಕರೆ ಮಾಡುತ್ತಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮಂಜೇಶ ನನಗೆ ಯಾವತ್ತೂ ಕರೆ ಮಾಡಿರಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 7 ರಿಂದ 12 ನೇ ಆರೋಪಿತರ ಪರ ವಕೀಲರಿಂದ :**

ಆರೋಪಿ 7 ರಿಂದ 12 ಪರ ವಕೀಲರು 1 ರಿಂದ 6 ನೇ ಆರೋಪಿತರ ಪರ ವಕೀಲರು ಮಾಡಿದಂತಹ ಪಾಟೀ ಸವಾಲಿನಂತೆಯೇ ತನ್ನ ಪಾಟೀ ಸವಾಲು ಇರುತ್ತದೆ ಎಂದು ಹೇಳಿರುತ್ತಾರೆ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**